O.S. No. 98 /2022
PW-01

**ದಿನಾಂಕ:13/06/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ: ಶ್ರೀ.ಆರ್.ಎಸ್.ಡಬ್ಲೂ. ವಕೀಲರಿಂದ:**

ನನ್ನ ಮುಖ್ಯ ವಿಚಾರಣೆ ಅಂಗವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಪ್ರಮಾಣದಲ್ಲಿರುವ ವಿಷಯಗಳು ಸರಿ ಹಾಗೂ ಸತ್ಯವಾಗಿದ್ದು, ಅದರಲ್ಲಿಯ ಎಲ್ಲ ಸಂಗತಿಗಳನ್ನು ತಿಳಿದ ನಂತರ ಸಹಿ ಮಾಡಿರುತ್ತೇನೆ. ಈ ಕೆಳಕಂಡಂತಹ ದಾಖಲೆಗಳನ್ನು ಹಾಜರುಪಡಿಸಿರುತ್ತೆನೆ.

ಆಸ್ತಿ ಸಂಖ್ಯೆ 63ಬಿ ರ ಡಿಮಾಂಡ ರಜೀಸ್ಟರ ಹಾಜರುಪಡಿಸಿದ್ದು, ಅದನ್ನು ನಿ.ಪಿ-1 ಎಂದು, ದಿನಾಂಕಃ 04-01-1982 ರ ನೋಂದಾಯಿತ ಖರೀದಿ ಪತ್ರದ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.2 ಎಂದು, ಮುಗತಮ್ಮ ರವರ ಮರಣ ಪ್ರಮಾಣ ಪತ್ರ ಹಾಜರಪಡಿಸಿದ್ದು ಅದನ್ನು ನಿ.ಪಿ.3 ಎಂದು, ವಂಶಾವಳಿ ಪ್ರುವಾಣ ಪತ್ರ ಹಾಜರಪಡಿಸಿದ್ದು ಅದನ್ನು ನಿ.ಪಿ.4 ಎಂದು, ಸರ್ವೆ ನಂಃ27 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.5 ಎಂದು, ಸರ್ವೆ ನಂಃ30/2 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.6 ಎಂದು, ಸರ್ವೆ ನಂಃ30/3 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.7 ಎಂದು, ಸರ್ವೆ ನಂಃ169/5 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.8 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟ ಖಾಸರಾ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿ.ಪಿ.9 (ಒಟ್ಟು ಐದು ಹಾಳೆಗಳು) ಎಂದು, ಅಸಲು ದಾವಾ ಸಂಃ 230/1993 ರಲ್ಲಿನ ತಿದ್ದುಪಡಿ ವಾದಪತ್ರದ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿ.ಪಿ.10 ಎಂದು, ಅಸಲು ದಾವಾ ಸಂಃ230/1998 ರಲ್ಲಿನ ಚಾಸಾ-1 ರವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ಒಟ್ಟಾರೆಯಾಗಿ ನಿ.ಪಿ.11 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

O.S. No. 98 /2022
PW-01

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ. ಹೇ. ಕೇ. ಸರಿ ಇದೆ**

**ಸಿವಿಲ್ ಮತ್ತು ಜೆ.ಎಮ್.ಎಫ.ಸಿ ನ್ಯಾಯಾಧೀಶರು**
**ಭಾಲ್ಕಿ.**